ವರ್ಗಾವಣೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ. ಅಲ್ಲಿಯೂ ಕೂಡ ವರ್ಗಾವಣೆ ಆಗುತ್ತವೆ. ಏಕೆಂದರೆ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಅವರು ಬೇಕೆಂದು ಕೇಳುತ್ತಾರೆ. ಆಗ ಅವರು ಒಪ್ಪಿಗೆ ಕೊಡುತ್ತಾರೆ, ಅವರನ್ನು ತೆಗೆದುಕೊಳ್ಳುತ್ತಾರೆ. ಇಂಥ ಸ್ಥಾನಗಳು ಕೂಡ ಖಾಲಿ ಆಗುತ್ತವೆ. ಅವುಗಳನ್ನು ಇದುವರೆಗೆ ತುಂಬಿಲ್ಲ. ಮರಣದಿಂದ ಖಾಲಿಯಾದ ಸ್ಥಾನಗಳನ್ನು ತುಂಬಿದ್ದೇವೆ. ಉಳಿದದ್ದನ್ನು ತುಂಬುತ್ತೇವೆ. ರಾಜೀನಾಮೆ ಕೊಟ್ಟದ್ದರಿಂದ ಖಾಲಿಯಾದ ಸ್ಥಾನಗಳನ್ನು ತುಂಬುತ್ತೇವೆ. ಕೆಲವನ್ನು ಈಗಾಗಲೇ ತುಂಬಿದ್ದೇವೆ. ತಾವು ಬಹಳಷ್ಟು ಶಾಲೆಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ, ಅವನ್ನು ತುಂಬುತ್ತೇವೆ. ಖಾಸಗಿ ಪ್ರೌಢಶಾಲೆಗಳಿಗೆ ಅನುದಾನ ಮಂಜೂರಾತಿ ಕೊಡುವುದರ ಬಗ್ಗೆ ಕೇಳಿದ್ದೀರಿ. ಮಂಜೂರಾತಿಯನ್ನು ಆದಷ್ಟು ಬೇಗ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದಷ್ಟು ಬೇಗನೆ ಎಂಬ ಶಬ್ದವನ್ನು ನಾನು ಬಹಳ ತೂಕದಿಂದ ಉಪಯೋಗ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಂತ್ರಿಮಂಡಲದಲ್ಲಿ ಬೇರೆಯವರು ಆ ಶಬ್ದವನ್ನು ತೂಕದಿಂದ ಉಪಯೋಗಿಸುವುದಿಲ್ಲವೆ ?

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಅದು ಅವರವರಿಗೆ ಸಂಬಂಧಪಟ್ಟಿದ್ದುದು. ಇದು ನನಗೆ ಸಂಬಂಧಪಟ್ಟಿದ್ದುದು. ನಾನು ತೂಕದಿಂದ ಆದಷ್ಟು ಬೇಗ ಅಂದರೆ ಬೇಗನೆ ಎಂದು ಹೇಳುತ್ತಿದ್ದೇನೆ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೋದಾಗ ಹೊಸ ಅಧ್ಯಾಪಕರನ್ನು ಕಾಣುತ್ತೀರಿ.

ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಕೊರತೆ

109 (1046) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದನ್ನು ಸರ್ಕಾರವು ಮನಗಂಡಿದೆಯೇ;

ಆ) ಹಾಗಿದ್ದಲ್ಲಿ ಈ ಕೊರತೆ ನಿವಾರಣೆಗೆ ಸರ್ಕಾರವು ಕೈಗೊಂಡ ಕ್ರಮವೇನು;

ಇ) ಅನೇಕ ಗ್ರಾಮಾಂತರ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಕಟ್ಟಡದ ಸೌಲಭ್ಯವಿಲ್ಲದೇ ಹಾಗೂ ಸಾಕಷ್ಟು ಕೊಠಡಿಗಳ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ;

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಮನಗಂಡಿದೆ

ಆ) ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಪೈಕಿ 1356 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇನ್ನು 6812 ಹುದ್ದೆಗಳನ್ನು ವಿಶೇಷ ನಿಯಮಾವಳಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ತೆರವಿರುವ 1405 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಬರುವ ಶೈಕ್ಷಣಿಕ ವರ್ಷದ ಪ್ರಾರಂಭದೊಳಗೆ ಭರ್ತಿ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ಇ) ಗಮನಿಸಿದೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಾನ್ಯ ಸಚಿವರ ಉತ್ತರದ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರ

ಕೊರತೆ ಸುಮಾರು 8168 ಹುದ್ದೆಗಳು ಇದ್ದು 1356 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆಂದು ಹೇಳಿದ್ದಾರೆ. ಉಳಿದ 6800 ಹುದ್ದೆಗಳನ್ನು ವಿಶೇಷ ನಿಯಮಾವಳಿ ಅಡಿಯಲ್ಲಿ ತುಂಬಲು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಆ ವಿಶೇಷ ನಿಯಮಾವಳಿ ಏನು ? ನಿರ್ದಿಷ್ಟವಾಗಿ ಈ 1356 ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ? ಅದಕ್ಕೆ ಒಂದು ಕಾಲ ನಿಗಧಿ ಮಾಡಿ ಹೇಳಬೇಕೆಂದು ಹೇಳುತ್ತಾ, ಪ್ರೌಢಶಾಲಾ ಶಿಕ್ಷಕರನ್ನು ತುಂಬಲು ಪ್ರಯತ್ನ ಮಾಡಲಾಗುವುದು ಎಂದು ಹೇಳಿದ್ದೀರಿ. ಸದನದಲ್ಲಿ ಅನೇಕ ಸಾರಿ ಶಿಕ್ಷಕರ ಕೊರತೆ ಬಗ್ಗೆ ಅನೇಕ ಪ್ರಶ್ನೆಗಳು ಬಂದಿದ್ದರೂ ಪ್ರಯತ್ನದ ಹಂತದಲ್ಲಿದೆ ಎಂದು ಉತ್ತರ ಬರುತ್ತಿದೆ. ಈಗ ಶೈಕ್ಷಣಿಕ ವರ್ಷ ಮುಗಿದು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಸಮಯ ಇದು. ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಸದಸ್ಯರು ಹೇಳಿದ ಹಾಗೆ 1356 ಹುದ್ದೆಗಳು ಅಂದರೆ ಅವನ್ನು ಹಿಂದೆಯೇ ರೆಕ್ರೂಟ್ ಮಾಡಿಕೊಂಡಿದ್ದೆವು. ಆ ರೀತಿ ರೆಕ್ರೂಟ್‌ಮೆಂಟ್ ಮಾಡಿದಾಗ ಅಲ್ಲಿ ವೆಯಿಟಿಂಗ್ ಲಿಸ್ಟ್ ಮಾಡಿದ್ದರು. ಆ ಲಿಸ್ಟ್‌ನಲ್ಲಿ ಕೆಲವೊಂದು ಖಾಲಿ ಇದ್ದ ಹುದ್ದೆಗಳನ್ನು ಅಂದರೆ 1356 ಹುದ್ದೆಗಳನ್ನು ವೆಯಿಟಿಂಗ್ ಲಿಸ್ಟ್‌ನಿಂದ ತುಂಬಿಕೊಳ್ಳುವುದಕ್ಕೆ ಸಂಬಂಧಪಟ್ಟ ಜಾಯಿಂಟ್ ಡೈರೆಕ್ಟರಿಗೆ ಈಗಾಗಲೇ ತಿಳಿಸಿದ್ದೇವೆ. 1356 ಹುದ್ದೆಗಳು ವೆಯಿಟಿಂಗ್ ಲಿಸ್ಟ್‌ನಲ್ಲಿ ಇದ್ದವು. 6812 ಹುದ್ದೆಗಳು ಏನಿವೆ ಇವನ್ನು ನಾವು ಸ್ಪೆಷಲ್-ರೆಕ್ರೂಟ್‌ಮೆಂಟ್ ಅಂದರೆ 29ವರ್ಷಕ್ಕಿಂತ ಮೇಲ್ಪಟ್ಟವರಿಗೆ ಎಸ್.ಸಿ., ಎಸ್.ಟಿ., 45 ವರ್ಷದವರೆಗೆ ಅವಕಾಶ ಮಾಡಿ ಸಧ್ಯದಲ್ಲಿ ತುಂಬುವುದಕ್ಕೆ ಈಗಾಗಲೇ ಕಾರ್ಯಕ್ರಮ ನಡೆದಿದೆ. ಸದ್ಯದಲ್ಲಿಯೇ ಅವನ್ನು ತುಂಬುತ್ತಿದ್ದೇವೆ. ಹೊಸ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಹೊಸ ಅಧ್ಯಾಪಕರನ್ನು ಕಾಣುತ್ತೀರಿ. ಅದಕ್ಕಿಂತಲೂ ಮೊದಲೇ ಈ ಕೆಲಸ ಪ್ರಾರಂಭ ಮಾಡಿದ್ದೇವೆ. ಏಪ್ರಿಲ್-ಮೇ ತಿಂಗಳಲ್ಲಿ ಜೂನ್ ಅಷ್ಟು ಹೊತ್ತಿಗೆ 6812ಅಧ್ಯಾಪಕರನ್ನು ಕೊಡುತ್ತೇವೆ.

ಶ್ರೀ ಕರಿಯಣ್ಣ:– ಕನ್ನಡ ಉಪಾಧ್ಯಾಯರನ್ನು ತುಂಬುತ್ತಿದ್ದೀರಿ. ಉರ್ದು ಶಾಲೆಗಳ ಉಪಾಧ್ಯಾಯರ ಬಗ್ಗೆ ತಾವು ಇಂಟರ್‌ವ್ಯೂ ಮಾಡುವುದಿಲ್ಲ. ಅವರನ್ನು ತಾವು ತುಂಬುವುದೂ ಇಲ್ಲ. ಹೀಗಿದ್ದರೆ ತಾವು ಉರ್ದು ಶಾಲೆಗಳನ್ನು ಮುಚ್ಚಿ. ಇಲ್ಲದಿದ್ದರೆ ತಾವು ಏನು ಮಾಡುತ್ತೀರಿ ಎಂದು ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಉರ್ದು ಶಾಲೆಗಳಲ್ಲಿ ಕನ್ನಡ ಅಧ್ಯಾಪಕರ ಕೊರತೆ ಇದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅದನ್ನೂ ಕೂಡ 6,812 ಜನರನ್ನು ತುಂಬುವಾಗ ಅಲ್ಲಿ ಎಷ್ಟು ಜಾಗ ಖಾಲಿ ಇದೆಯೋ ಅಲ್ಲಿ ಇವರನ್ನು ತುಂಬುತ್ತೇವೆ. ಉರ್ದು ಟೀಚರ್ಸ್‌ನ್ನು ಸಹ ಮುಂದಿನ ರೆಕ್ರೂಟ್‌ಮೆಂಟ್‌ನಲ್ಲಿ ತುಂಬುತ್ತೇವೆ.

ಶ್ರೀಮತಿ ಮೋಟಮ್ಮ:– ಈಗಾಗಲೇ ಸಾಕಷ್ಟು ಶಿಕ್ಷಕರ ಕೊರತೆ ಇದ್ದು ನಮ್ಮ ಹೈಸ್ಕೂಲು ಮತ್ತು ಜೂನಿಯರ್ ಕಾಲೇಜುಗಳಲ್ಲಿನ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ತಾವು ಮಾರ್ಚ್, ಏಪ್ರಿಲ್ ಎಂದು ಹೇಳುತ್ತಿದ್ದೀರಿ. ತಾವು ಶಿಕ್ಷಕರನ್ನು ತುಂಬದೇ, ಸಂಬಂಧಪಟ್ಟ ಶಿಕ್ಷಕರು ಹಾಜರು ಆಗದೇ ಪಾಠ ಪ್ರವಚನಗಳು ಆಗುತ್ತಿಲ್ಲ. ಅದರಲ್ಲೂ ಮಲೆನಾಡಿನಲ್ಲಿ ಇಲ್ಲವೇ ಇಲ್ಲ. ಹೀಗಾಗಿ ಹಾಳಾಗುತ್ತಿರುವ ಮಕ್ಕಳ ಮುಂದಿನ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಇನ್ನು ಮುಂದೆ ಆದರೂ ಇಂತಹ ಒಂದು ಅಧೋಗತಿಯ ಸನ್ನಿವೇಶ ಸೃಷ್ಟಿ ಆಗದ ಹಾಗೆ ಎಷ್ಟು ದಿವಸದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿ ಕೊರತೆಯನ್ನು ನೀಗಿಸುತ್ತೀರಾ ಎಂದು ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ. ಹೊಸ ಶೈಕ್ಷಣಿಕ ವರ್ಷದಲ್ಲಿ ಹೊಸ ಅಧ್ಯಾಪಕರನ್ನು ನಿಮ್ಮ ನಿಮ್ಮ ಶಾಲೆಗಳಲ್ಲಿ ನೋಡುತ್ತೀರಿ ಎಂದು. ಮಾನ್ಯ ಮೋಟಮ್ಮನವರು ಮೇಲಿಂದ ಮೇಲೆ ಜೂನಿಯರ್ ಕಾಲೇಜುಗಳ ಲೆಕ್ಚರರ್ಸ್ ಬಗ್ಗೆ ಹೇಳುತ್ತಿರುತ್ತಾರೆ. ಅದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಇಲ್ಲಿ ಪ್ರಶ್ನೆ ಮಾಡಿದ್ದಾರೆ. ಈಗಾಗಲೇ ಲೆಕ್ಚರರ್ಸ್ ಸೆಲಕ್ಷನ್ ಆಗಿದೆ.

ಲಿಸ್ಟ್‌ನ್ನು ಪಬ್ಲಿಷ್ ಮಾಡಿದ್ದೇವೆ. ಆದರೆ, ಪೋಲೀಸ್ ರಿಪೋರ್ಟ್ ಮತ್ತು ಇನ್‌ಕಮ್ ರಿಪೋರ್ಟ್ ಬರಬೇಕಾಗುತ್ತದೆ. ಇದು ಒಂದು ಪ್ರೋಸೀಜರ್. ಇದರ ಪ್ರಕಾರ ವರದಿ ಬಂದ ಮೇಲೆ ಅವರನ್ನು ಕೂಡ ಪೋಸ್ಟಿಂಗ್ ಮಾಡುವುದು ಮಾತ್ರ ಇದೆ. ರಿಪೋರ್ಟ್ ಬಂದ ಕೂಡಲೇ ನಾವು ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:– ಗ್ರಾಮಾಂತರ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಕಟ್ಟಡದ ಕೊರತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಕಟ್ಟಡದ ಕೊರತೆ ನೀಗುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ? ಗ್ರಾಮಾಂತರ ಪ್ರದೇಶ ಹಾಗೂ ನಗರ ಪ್ರದೇಶದಲ್ಲಿ ಶಾಲೆಗಳ ರಿಪೇರಿ, ಮೇಂಟೆನೆನ್ಸ್ ಕೆಲಸ ವ್ಯವಸ್ಥಿತವಾಗಿ ಆಗುತ್ತಾ ಇಲ್ಲ. ಶಾಲೆಗಳ ನಿರ್ಮಾಣ ಮತ್ತು ರಿಪೇರಿ ಕೆಲಸಕ್ಕೆ ವಾರ್ಷಿಕವಾಗಿ ಸರ್ಕಾರ ಏನು ನಿಗದಿ ಮಾಡಿದೆ ಅದರಂತೆ ಖರ್ಚು ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೆ, ಹೈಸ್ಕೂಲು, ಪ್ರೈಮರಿ ಶಾಲೆಗಳು ಜಿಲ್ಲಾಪರಿಷತ್ತಿಗೆ ಬರುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಕಟ್ಟಬೇಕಾಗುತ್ತದೆ. ಕಟ್ಟಡ ಇಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಕೆಲವೊಂದು ಜಿಲ್ಲಾಪರಿಷತ್ತಿನವರು ಹೈಸ್ಕೂಲು ಮಂಜೂರು ಮಾಡಿದರು. ಸರ್ಕಾರದವರು ಸರ್ಕಾರಿ ಹೈಸ್ಕೂಲು ಮಂಜೂರು ಮಾಡಿದರು. ಇಂತಹ ಸಮಸ್ಯೆಗಳು ಬರುವುದು ಸ್ವಾಭಾವಿಕ. ನಮ್ಮ ಸರ್ಕಾರದ ಜವಾಬ್ದಾರಿ ಇರುತ್ತದೆ. ಜಿಲ್ಲಾ ಪರಿಷತ್ತಿನವರಿಗೆ ಹೇಳಿ ಅವರ ಬಡ್ಜೆಟ್‌ನಲ್ಲಿ ಶಾಲೆಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುತ್ತೇವೆ.

ರಾಜ್ಯದಲ್ಲಿ ಕೋಳಿಮರಿ ಉತ್ಪಾದನಾ ಉದ್ಯಮಗಳ ಸಂಖ್ಯೆ

110 (30) ಶ್ರೀ ಕೆ. ಹರ್ಷಕುಮಾರ ಗೌಡ(ಜಾಮರಾಜ):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಹ್ಯಾಚರೀಸ್ (ಕೋಳಿ ಮರಿ ಉತ್ಪಾದನೆ ಉದ್ಯಮಗಳೆಷ್ಟು);

ಆ) ಅವುಗಳಲ್ಲಿ, ಸ್ವದೇಶೀಯ ಸಂಸ್ಥೆಗಳೆಷ್ಟು, ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳೆಷ್ಟು;

ಇ) ಈ ಸಂಸ್ಥೆಗಳ ಮೇಲೆ ರಾಜ್ಯ ಸರಕಾರಿ ಹೊಂದಿರುವ ಹತೋಟಿ ಏನು;

ಈ) ಪ್ರತಿ ಹ್ಯಾಚರಿ ನಡೆಸುವ ವಾರ್ಷಿಕ ಅಂದಾಜು ವ್ಯವಹಾರ ಎಷ್ಟು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) 21

ಆ) ಸ್ವದೇಶೀಯ –21
ವಿದೇಶೀಯ – ಇಲ್ಲ

ಇ) ಸದ್ಯಕ್ಕೆ ಯಾವ ಹತೋಟಿ ಇರುವುದಿಲ್ಲ.

ಈ) ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.